“ಅವಳು ಏಳುವುದು ಎಂಟು ಗಂಟೆಯ ಮೇಲೆ. ಶನಿವಾರವಾದ್ದರಿಂದ ಅವಳಿಗೂ ಶಾಲೆಗೆ ರಜೆ. ಅವಳೇನಾದರೂ ಬೇಗ ಎದ್ದರೆ, ನಿಮ್ಮ ಮೊಬೈಲ್‌ಗೆ ಕಾಲ್ ಮಾಡ್ತಾಳೆ...” ನಾನು ಏನೋ ಹೊಸ ನೆಪ ಹುಡುಕುತ್ತಿದ್ದೇನೆ ಎಂದೆಣಿಸಿದ ಮಾಲಾ, ನನ್ನ ಚಿಂತೆಗೆ ಪರಿಹಾರ ಸೂಚಿಸಿದಳು.

ಮಾಲಾಳ ಮೊಬೈಲನ್ನು ಪಕ್ಕದ ಕೋಣೆಯಲ್ಲಿ ಮಂಚದ ಮೇಲೆ ಮಲಗಿದ್ದ ಪುಟ್ಟಿಯ ಪಕ್ಕದಲ್ಲಿಟ್ಟು, ಹೊರಬಾಗಿಲಿಗೆ ಬೀಗಹಾಕಿ, ಮಾಲಾ ಜೊತೆ ಹೊರಬಿದ್ದೆ.

ಮನೆಯಿಂದ ಪಾರ್ಕು ಸುಮಾರು 150 ಮೀಟರ್ ದೂರದಲ್ಲಿತ್ತು. ಬೆಂಗಳೂರಿನ ಹೊರಭಾಗವಾದ್ದರಿಂದ, ಉಳಿದ ಬೆಂಗಳೂರಿನ ಪ್ರದೇಶಗಳಿಗೆ ಹೋಲಿಸಿದರೆ ಜನದಟ್ಟಣೆ ಕಡಿಮೆ. ಸಮಯ ಸುಮಾರು ಆರೂವರೆ ಗಂಟೆ ಆಗಿದ್ದರೂ, ಬೆಳಗಿನ ವಾಯುವಿಹಾರಕ್ಕಾಗಿ ಹೊರಬಿದ್ದವರ ಸಂಖ್ಯೆ ವಿರಳವಾಗಿತ್ತು. ನಾನು ಪಾರ್ಕಿನ ಗೇಟನ್ನು ತೆರೆದು ಒಳನಡೆದೆ.

ಇನ್ನೂ ಪಾರ್ಕಿನ ಹೊರಗಡೆ ಇದ್ದ ಮಾಲಾ ಒಳಹೊರಟಿದ್ದ ನನ್ನನ್ನು ಕೂಗಿ ಕರೆದಳು, “ರೀ... ಒಂದು ನಿಮಿಷ ಬನ್ನಿ ಇಲ್ಲಿ!!”

ಅವಳ ಧ್ವನಿಯಲ್ಲಿದ್ದ ಉದ್ವೇಗವನ್ನು ಗುರುತಿಸಿದ ನಾನು, ಸ್ವಲ್ಪ ಕುತೂಹಲದಿಂದಲೇ ಅವಳ ಹತ್ತಿರ ಹೋದೆ.

“ಅಲ್ಲಿ ಏನೋ ಬಿದ್ದಿದೆ!! ನೋಡಿದ್ರಾ?” ಪಾರ್ಕಿನ ಹೊರಭಾಗದಲ್ಲಿನ ಮರವೊಂದರ ಬುಡದ ಕಡೆ ಬೆರಳು ಮಾಡಿ ತೋರಿಸುತ್ತಾ ಹೇಳಿದಳು. ಗುಲಾಬಿಬಣ್ಣದ ಹಾಳೆಯೊಳಗಿಂದ, ಹಳದಿಬಣ್ಣದ ವಸ್ತುವೊಂದು ಹೊರಗಿಣುಕುತ್ತಿರುವಂತಿತ್ತು. ಹತ್ತಿರ ಹೋಗಿ, ಹುಲ್ಲಿನ ಮಧ್ಯದಲ್ಲಿ ಬಿದ್ದಿದ್ದ ಆ ಹಾಳೆಯನ್ನು ಬಿಡಿಸಿ ನೋಡಿದೆ.

“ಚಿನ್ನದ ಸರ ಕಣೇ ಇದು! ಯಾರೋ ಬೀಳಿಸಿಕೊಂಡು ಹೋಗಿದ್ದಾರೆ ಅನ್ನುತ್ತೆ...” ಹತ್ತಿರದಲ್ಲೇ ಇದ್ದ ಮಾಲಾಗೆ ಮೆಲುದನಿಯಲ್ಲಿ ಹೇಳಿದೆ.

ಸುತ್ತ ಯಾರಾದ್ರೂ ಇದ್ದಾರ ಅಂತ ನೋಡಿದೆ. ಪಾರ್ಕಿನ ಒಳಗಡೆ ಜಾಗಿಂಗ್ ಮಾಡುತ್ತಿದ್ದ ಒಂದೆರಡು ಜನರನ್ನು ಬಿಟ್ಟರೆ, ಹೊರಗಡೆ ಮತ್ತಾರೂ ಕಾಣಲಿಲ್ಲ.

“ಅವಲಕ್ಕಿಸರ ಕಣ್ರೀ ಇದು. ನಾಲ್ಕು ಎಳೆಯದ್ದು. ಸುಮಾರು 40 ಗ್ರಾಂ ಇರಬಹುದು. ಒಂದು ಲಕ್ಷದ ಮೇಲೆ ಆಗುತ್ತೆ ಇದರ ಬೆಲೆ!! ಇದನ್ನ ಏನ್ಮಾಡೋದ್ರೀ ಈಗ?” ಸಿಕ್ಕ ಸರದ ಬೆಲೆಯ ಲೆಕ್ಕಾಚಾರ, ಅವಳ ಧ್ವನಿಯ ಗಾಂಭೀರ್ಯವನ್ನು ಮತ್ತಷ್ಟು ಹೆಚ್ಚಿಸಿತ್ತು.

“ಇನ್ನೂ ಒಂದು ಗಂಟೆಯಾದ್ರೂ ನಾವು ಇಲ್ಲೇ, ಪಾರ್ಕಿನಲ್ಲೇ ಇರ್ತೀವಲ್ಲ... ಅಷ್ಟರಲ್ಲಿ ಯಾರಾದರೂ ಈ ಸರವನ್ನು ಹುಡುಕಿಕೊಂಡು ಬರ್ತಾರೇನೋ ಅಂತ ನೋಡೋಣ...” ಎನ್ನುತ್ತಾ, ಸರವನ್ನು ಮತ್ತೆ ಗುಲಾಬಿಬಣ್ಣದ ಹಾಳೆಯಲ್ಲಿ ಮುಚ್ಚಿ ನನ್ನ ಟ್ರ್ಯಾಕ್‌ಪ್ಯಾಂಟ್‌ನ ಜೇಬಿಗಿಳಿಸಿದೆ.

ಪಾರ್ಕಿನ ಒಳಗಡೆ ನನ್ನ ಜೊತೆ ಒಂದೆರಡು ಸುತ್ತು ಜಾಗಿಂಗಿಗೆ ಬಂದಳಾದರೂ, ಮಾಲಾಳ ಮುಖಚಹರೆಯಿಂದ, ಅವಳ ಮನಸ್ಸು ಇನ್ನೂ ಅವಲಕ್ಕಿಸರದಲ್ಲೇ ಹೊರಳಾಡುತ್ತಿದೆ ಎಂಬುದು ಅರಿವಿಗೆ ಬಂತು.

“ನಾನು ಇಲ್ಲೇ ಬೆಂಚಿನ ಮೇಲೆ ಕೂತಿರ್ತೀನಿ. ನನ್ನ ಕೈಲಿ ನಿಮ್ಮ ಮೊಬೈಲ್ ಕೊಟ್ಟು, ನೀವು ಇನ್ನೂ ನಾಲ್ಕಾರು ಸುತ್ತು ಓಡಿ ಬನ್ನಿ” ಎಂದವಳೇ ನನ್ನ ಪ್ಯಾಂಟಿನ ಜೇಬಿನಿಂದ ಮೊಬೈಲ್ ತೆಗೆದುಕೊಂಡು, ಬೆಂಚಿನಮೇಲೆ ಕುಳಿತಳು. ಇವಳು ಇನ್ನು ತನ್ನ ಅಮ್ಮನಿಗೆ ಕರೆ ಮಾಡಿ ಸರದ